## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2012-13 ನೇ ಸಾಲಿನಲ್ಲಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಮೂಲಕ ಅನುಷ್ಠಾನ ಮಾಡುತ್ತಿರುವ ವಸತಿ ಯೋಜನೆಗಳಡಿಯಲ್ಲಿ ಮನೆ ನಿರ್ಮಾಣ ಮಾಡಲು ಪ್ರಾರಂಭಿಸುವ ಫಲಾನುಭವಿಗಳಿಗೆ ಸಹಾಯಧನವನ್ನು ಹೆಚ್ಚಿಸುವ ಬಗ್ಗೆ.

**ಓದಲಾಗಿದೆ:**

1. **ಸರ್ಕಾರದ ಆದೇಶ ಸಂಖ್ಯೆ : ವಇ 86 ಹೆಚ್‌ಎಎಂ 2009, ದಿನಾಂಕ :13.04.2010.**

2. **ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಪ್ರಸ್ತಾವನೆ ಸಂಖ್ಯೆ :MD RGRHCL 34 FIN 18 2012, ದಿನಾಂಕ :17.05.2012.**

**ಪ್ರಸ್ತಾವನೆ:**

ಓಲಾಗಿರುವ(1) ರ ಸರ್ಕಾರದ ಆದೇಶದಲ್ಲಿ ರಾಜ್ಯದಲ್ಲಿ ಬಡವರಿಗಾಗಿ ವಸತಿ ಇಲಾಖೆಯಿಂದ ಅನುಷ್ಠಾನಗೊಳಿಸುವ ವಿವಿಧ ಯೋಜನೆಗಳಡಿಯಲ್ಲಿ ಫಲಾನುಭವಿಗಳಿಗೆ ಸರ್ಕಾರದ ಸಹಾಯಧನ ರೂ.50,000/- ನೀಡಿ ಘಟಕ ವೆಚ್ಚವನ್ನುರೂ.63,000/-ಗಳಿಗ ನಿಗದಿಪಡಿಸಿ ಆದೇಶ ಹೊರಡಿಸಲಾಗಿತ್ತು.

ಕರ್ನಾಟಕ ಸರ್ಕಾರದವರು ರಾಜ್ಯದಲ್ಲಿ ವಸತಿ ಯೋಜನೆಗಳಡಿಯಲ್ಲಿ ನೀಡುವ ಸಹಾಯಧನವನ್ನು 50,000/- ರೂ . ಗಳಿಂದ 75,000/- ರೂ . ಗಳಿಗೆ ಹೆಚ್ಚಿಸಲಾಗುವುದು ಹಾಗೂ ಮನೆಯ ನಿರ್ಮಾಣ ವೆಚ್ಚವನ್ನು ರೂ .1,00,000/- ಕ್ಕೆ ಏರಿಸಲಾಗುವುದೆಂದು 2012-13 ನೇ ಸಾಲಿನ ಆಯವ್ಯಯದಲ್ಲಿ ಘೋಷಣೆ ಮಾಡಿರುತ್ತಾರೆ. ಆ ಪ್ರಕಾರ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ವ್ಯವಸ್ಥಾಪಕ ನಿರ್ದೇಶಕರು ದಿನಾಂಕ:17.05.2012ರಂದು (ಮೇಲೆ(2)ರಲ್ಲಿ ಓದಲಾಗಿದೆ) ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸರ್ಕಾರದವರು ಆಯವ್ಯಯದಲ್ಲಿ ಮಾಡಿರುವ ಘೋಷಣೆ ಅನುಸಾರವಾಗಿ ನಿಗಮದ ಮೂಲಕ ಗ್ರಾಮೀಣ ಪ್ರದೇಶದಲ್ಲಿ ಅನುಷ್ಠಾನಗೊಳಿಸುತ್ತಿರುವ ಬಸವ ವಸತಿ ಯೋಜನೆ ಹಾಗೂ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳಿಗೆ ಸರ್ಕಾರದ ಸಹಾಯಧನವನ್ನು 50,000/-ರೂ.ಗಳಿಂದ 75,000/-ರೂ.ಗಳಿಗೆ ಹೆಚ್ಚಿಸಿ ಸರ್ಕಾರದ ಆದೇಶ ಹೊರಡಿಸಬೇಕಾಗಿರುತ್ತದೆ. ಜೊತೆಗೆ ಘಟಕವೆಚ್ಚವನ್ನು ಹಿಂದಿನ 63,000/-ರೂ.ಗಳಿಂದ 1.00 ಲಕ್ಷರೂ.ಗಳಿಗೆ ಹೆಚ್ಚಿಸಿ ಆದೇಶ ಹೊರಡಿಸಬೇಕಾಗಿರುತ್ತದೆ. ಕೇಂದ್ರ ಪುರಸ್ಕೃತ ಯೋಜನೆಯಾದ ಇಂದಿರಾ ಆವಾಸ್ ಯೋಜನೆಯಡಿ ಕೇಂದ್ರ ಸರ್ಕಾರದಿಂದ ಪ್ರತಿಮನೆಗೆ 33,750/-ರೂ. ನೀಡುತ್ತಿರುವುದರಿಂದ ರಾಜ್ಯ ಸರ್ಕಾರವು ಸದರಿ ಕೇಂದ್ರ ಸರ್ಕಾರದ ಸಹಾಯಧನವನ್ನು ಹೊರತು ಪಡಿಸಿ ಉಳಿದಂತೆ ಪ್ರತಿ ಮನೆಗೆ 41,250/-ರೂ.ಗಳನ್ನು ತನ್ನ ಪಾಲಿನ ಅನುದಾನವಾಗಿ ಒಟ್ಟು ಗೂಡಿಸಿ ಪ್ರತಿಮನೆಗೆ ಒಟ್ಟು75,000/-ರೂ.ಗಳಂತೆ ಸಹಾಯಧನವನ್ನು ನೀಡಬೇಕಾಗಿರುತ್ತದೆ. ಅದೇ ಪ್ರಕಾರ ನಗರ ವಸತಿ ಯೋಜನೆಯಾದ ವಾಜಪೇಯಿ ನಗರ ವಸತಿ ಯೋಜನೆಯಡಿ ಫಲಾನುಭವಿಗಳಿಗೆ ಈಗ ನೀಡಲಾಗುತ್ತಿರುವ 50,000/-ರೂ.ಗಳ ಸಹಾಯಧನವನ್ನು 75,000/-ರೂ.ಗಳಿಗೆ ಹೆಚ್ಚಿಸಬೇಕಾಗಿದೆ. ಜೊತೆಗೆ ನನ್ನ ಮನೆ (ISHUP) ಯೋಜನೆಯಡಿ ಅಥವಾ ಬ್ಯಾಂಕುಗಳಿಂದ ಸಾಲ 75,000/-ರೂ. ಹಾಗೂ ಫಲಾನುಭವಿಯ ಕನಿಷ್ಠ ವಂತಿಗೆ 30,000/-ರೂ. ಒಳಗೊಂಡಂತೆ ಒಟ್ಟಾರೆ ಮನೆ ನಿರ್ಮಾಣದ ಘಟಕವೆಚ್ಚ 1,30,000/-ರೂ.ಗಳಿಂದ 1,80,000/-ರೂ.ಗಳಿಗೆ ಹೆಚ್ಚಿಸ ಬೇಕಾಗಿರುತ್ತದೆ.

ಹೆಚ್ಚಿಸಲಾದ ಸಹಾಯಧನ ಮತ್ತು ಘಟಕ ವೆಚ್ಚವನ್ನು 01.04.2012 ರ ನಂತರ ನಿರ್ಮಾಣ ಪ್ರಾರಂಭಿಸಲಾಗುವ ಎಲ್ಲಾ ಮನೆಗಳಿಗೂ ಅನ್ವಯಿಸುವಂತೆ ಆದೇಶ ಹೊರಡಿಸಬೇಕೆಂದು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ವ್ಯವಸ್ಥಾಪಕ ನಿರ್ದೇಶಕರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ : ವಇ 90 ಹೆಚ್‌ಎಹೆಚ್ 2012, ಬೆಂಗಳೂರು , ದಿನಾಂಕ :05.07.2012.**

ಸರ್ಕಾರವು ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ , 2012-13 ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ, ರಾಜ್ಯದಲ್ಲಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಮೂಲಕ ಅನುಷ್ಠಾನಗೊಳಿಸುತ್ತಿರುವ ವಿವಿಧ ವಸತಿ ಯೋಜನೆಗಳಡಿ ನಿರ್ಮಾಣಗೊಳ್ಳುತ್ತಿರುವ ಮನೆಗಳ ಸಹಾಯಧನ ಮತ್ತು ಘಟಕ ವೆಚ್ಚವನ್ನು ಈ ಕೆಳಗಿನಂತೆ ಹೆಚ್ಚಿಸಲು ಮಂಜೂರಾತಿ ನೀಡಿದೆ.

| ಯೋಜನೆ | ಸರ್ಕಾರದ ಸಹಾಯಧನ | ಘಟಕವೆಚ್ಚ | ಷರಾ |
|---|---|---|---|
| ಬಸವ ವಸತಿ ಯೋಜನೆ | ರೂ.75,000/- | ರೂ.1,00,000/- | ಉಳಿದ ರೂ.25,000/- ಸಾಲ ಅಥವಾ ಫಲಾನುಭವಿ ವಂತಿಗೆ. |
| ಇಂದಿರಾ ಆವಾಸ್ ಯೋಜನೆ | ರೂ.75,000/- (ಕೇಂದ್ರ ಸರ್ಕಾರದ ಸಹಾಯಧನ ರೂ.33,750+ರಾಜ್ಯ ಸರ್ಕಾರದಿಂದ ರೂ.41,250 ಸೇರಿದಂತೆ) | ರೂ.1,00,000/- | ಉಳಿದ ರೂ.25,000/- ಸಾಲ ಅಥವಾ ಫಲಾನುಭವಿ ವಂತಿಗೆ. |
| ವಾಜಪೇಯಿ ನಗರ ವಸತಿ ಯೋಜನೆ | ರೂ.75,000/- | ರೂ.1,80,000/- | ನನ್ನ ಮನೆ (ISHUP) ಯೋಜನೆಯಡಿ ಅಥವಾ ಬ್ಯಾಂಕುಗಳಿಂದ ಸಾಲ ರೂ.75,000/- ಮತ್ತು ಫಲಾನುಭವಿಯ ಕನಿಷ್ಠ ವಂತಿಗೆ ರೂ.30,000/-. |

ಈ ಹೆಚ್ಚುವರಿ ಸಹಾಯಧನ ಮತ್ತು ಘಟಕವೆಚ್ಚವನ್ನು ದಿನಾಂಕ:01.04.2012ರ ನಂತರ ಪ್ರಾರಂಭಿಸುವ ವಸತಿ ಯೋಜನೆಗಳ ಮನೆಗಳಿಗೆ ಅನ್ವಯಿಸುವಂತೆ ಮಂಜೂರಾತಿ ನೀಡಲಾಗಿದೆ.ಇದಕ್ಕೆ ತಗಲುವ ವೆಚ್ಚವನ್ನು 2012-13ನೇ ಸಾಲಿನ ಆಯವ್ಯಯದಲ್ಲಿ ವಸತಿ ಇಲಾಖೆಯ ಯೋಜನೆಗಳ ಅನುಷ್ಠಾನಕ್ಕೆ ನೀಡಲಾಗಿರುವ ಲೆಕ್ಕ ಶೀರ್ಷಿಕೆಗಳಲ್ಲಿ ಒದಗಿಸಲಾಗಿರುವ ಅನುದಾನದಿಂದ ಭರಿಸತಕ್ಕದ್ದು.

Digitally Signed by :B Shankarappa

ಈ ಆದೇಶವನ್ನು ಆರ್ಥಿಕ ಇಲಾಖೆಯವರ ಟಿಪ್ಪಣಿ ಸಂಖ್ಯೆ:276ವೆಚ್ಚ-9/2012, ದಿನಾಂಕ: 12.06.2012ರ ಸಹಮತಿಯೊಂದಿಗೆ ಹೊರಡಿಸಿದೆ.

ಈ ಆದೇಶವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದವರು ಸೂಕ್ತ ಸುತ್ತೋಲೆಯನ್ನು ಹೊರಡಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

ಬಿ.ಶಂಕರಪ್ಪ
( ಪೀಠಾಧಿಕಾರಿ-2 )
ವಸತಿ ಇಲಾಖೆ.

**ಇವರಿಗೆ:**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳು. ಕಂದಾಯ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಯೋಜನಾ ಇಲಾಖೆ.
3. ಎಲ್ಲಾ ಜಿಲ್ಲಾಧಿಕಾರಿಗಳು.
4. ಎಲ್ಲಾ ವಿಭಾಗಾಧಿಕಾರಿಗಳು.
5. ವ್ಯವಸ್ಥಾಪಕ ನಿರ್ದೇಶಕರು, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ, ಬೆಂಗಳೂರು.
6. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಎಲ್ಲಾ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿಗಳು, ಎಲ್ಲಾ ತಾಲ್ಲೂಕುಗಳ ತಹಶೀಲ್ದಾರ್ ರವರು, ಎಲ್ಲಾ ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯ್ತಿ ಹಾಗೂ ಆಯುಕ್ತರು, ನಗರಸಭೆ ರವರಿಗೆ ಮತ್ತು ಇತರೆ ಸಂಬಂಧಪಟ್ಟ ಅಧಿಕಾರಿಗಳಿಗೆ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತರವರ ಮುಖಾಂತರ.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-9), ವಿಧಾನಸೌಧ.
8. ಶಾಖಾ ರಕ್ಷಾಕಡತ/ಹೆಚ್ಚುವರಿ ಪ್ರತಿ.

Digitally Signed by :B Shankarappa